1-4-2026
UDAYAVANI - MANIPAL

# ಕೆಎಂಸಿ ಆಸ್ಪತ್ರೆ: ಸಿಪಿಆರ್, ಇಸಿಸಿ ಮಾರ್ಗಸೂಚಿ ಬಿಡುಗಡೆ




**ಮಣಿಪಾಲ, ಮಾ. 31:** ಇಲ್ಲಿನ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಭಾರತದಲ್ಲಿ ಕಾರ್ಡಿಯೋಪಲ್ಮನರಿ ರಿಸಸಿಟೇಶನ್ (ಸಿಪಿಆರ್) ಮತ್ತು ತುರ್ತು ಕಾರ್ಡಿಯೋ ವಾಸ್ಕುಲರ್ ಕೇರ್, (ಇಸಿಸಿ) ಸಂಬಂಧ ತನ್ನ 2025ರ ಮಾರ್ಗಸೂಚಿ ಹೊರಡಿಸಿದೆ.

'ಪುನರುಜ್ಜೀವನ ವಿಜ್ಞಾನ ಮತ್ತು ತುರ್ತು ಕಾರ್ಡಿಯೋ ವಾಸ್ಕುಲರ್ ಕೇರ್‌ನಲ್ಲಿ ಅಡ್ವಾನ್ಸಿಂಗ್ ಎಕ್ಸಲೆನ್ಸ್' ಎಂಬ ವಿಷಯದೊಂದಿಗೆ ಕೆಎಂಸಿಯ ಡಾ| ಟಿಎಂಎ ಪೈ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಇದನ್ನು ಬಿಡುಗಡೆ ಮಾಡಲಾಯಿತು.

ಮಾಹೆ ಸಹ ಕುಲಪತಿ ಡಾ| ಶರತ್ ಕುಮಾರ್ ರಾವ್ ಕೆ. ಮಾತನಾಡಿ, ಜೀವ ಉಳಿಸುವ ಕೌಶಲಗಳು ತಳಮಟ್ಟದವರನ್ನು ತಲುಪಿದಾಗ ಮಾತ್ರ ಅಂತಹ ಮಾರ್ಗಸೂಚಿಗಳ ನಿಜವಾದ ಪರಿಣಾಮ ಸಾಧಿಸಲಾಗುತ್ತದೆ ಎಂದರು.

ಸಿಪಿಆರ್ ಅರಿವು ಮತ್ತು ತರಬೇತಿಯನ್ನು ಆಸ್ಪತ್ರೆಗಳನ್ನು ಮೀರಿ ಸಮುದಾಯ ಮಟ್ಟಕ್ಕೆ ವಿಸ್ತರಿಸುವ ಅಗತ್ಯ ಕುರಿತು ವಿವರಿಸಿ, ಪೊಲೀಸ್ ಸಿಬಂದಿ, ಆಶಾ ಕಾರ್ಯಕರ್ತೆಯರು, ಆಟೋ ಚಾಲಕರು, ಶಿಕ್ಷಕರು ಸಹಿತ ಪ್ರಥಮ ಪ್ರತಿಕ್ರಿಯೆ ನೀಡುವವರಿಗೆ ಇದು ಸಮರ್ಪಕವಾಗಿ ತಲುಪಬೇಕು. ಆಸ್ಪತ್ರೆಗಳು ಮತ್ತು ತರಬೇತಿ ಕೇಂದ್ರಗಳಲ್ಲಿ ಸಿಪಿಆರ್ ಅಭ್ಯಾಸಗಳನ್ನು ಪ್ರಮಾಣೀಕರಿಸಲು, ತುರ್ತು ಹೃದಯರಕ್ತನಾಳದ ಆರೈಕೆಯ ಗುಣಮಟ್ಟವನ್ನು ಸುಧಾರಿಸಲು ಮತ್ತು ಆರೋಗ್ಯ ಪೂರೈಕೆದಾರರಲ್ಲಿ ಸನ್ನದ್ಧತೆಯನ್ನು ಹೆಚ್ಚಿಸಲು ಮಾರ್ಗಸೂಚಿ ಸಹಾಯ ಮಾಡುತ್ತದೆ ಎಂದರು.

ಎಎಚ್‌ಎಯ ಏಷ್ಯಾ ಪೆಸಿಫಿಕ್ ಉಪಾಧ್ಯಕ್ಷ ಜಾನ್ ಕಿಮ್ ಮಾತನಾಡಿ, ಹೃದಯ ತುರ್ತು ಸಂದರ್ಭಗಳಲ್ಲಿ ಬದುಕುಳಿಯುವ ಫಲಿತಾಂಶಗಳನ್ನು ಸುಧಾರಿಸುವಲ್ಲಿ ಜಾಗತಿಕ ಸಹಯೋಗದ ಮಹತ್ವ ತಿಳಿಸಿದರು.

ಎಎಚ್‌ಎ ಇಂಡಿಯಾ ಕನ್ಸಲ್ಟೆಂಟ್ ಪ್ರಾದೇಶಿಕ ನಿರ್ದೇಶಕ ಡಾ| ಸಚಿನ್ ವಿ. ಮೆನನ್ ಪುನರುಜ್ಜೀವನ ತರಬೇತಿ ಬಲಪಡಿಸುವಲ್ಲಿ ಭಾರತೀಯ ಸಂಸ್ಥೆಗಳ ಬೆಂಬಲವನ್ನು ಶ್ಲಾಘಿಸಿದರು.

ಕೆಎಂಸಿ ಡೀನ್ ಡಾ| ಅನಿಲ್ ಕೆ. ಭಟ್ ಸ್ವಾಗತಿಸಿ, ಪ್ರಸ್ತಾವನೆಗೈದರು. ಕೆಎಂಸಿ ತರಬೇತಿ ಕೇಂದ್ರದ ಸಂಯೋಜಕ ಡಾ| ವಿಮಲ್ ಕೃಷ್ಣನ್ ಎಸ್. ವಂದಿಸಿ, ಡಾ| ಸುಷ್ಮಾ ಪ್ರಭಾತ್ ಮತ್ತು ಡಾ| ನಿಶಾ ಸಾರಾ ಮುಂಡಪ್ಪಲ್ಲಿಲ್ ಜಾಕೋಬ್ ನಿರೂಪಿಸಿದರು.

ವಿಜಯವಾಣಿ

ಬುಧವಾರ 1 ಏಪ್ರಿಲ್ 2026
1 APRIL 2026

ಡಾ.ಶರತ್ ಕುಮಾರ್ ಅಭಿಪ್ರಾಯ | ಕೆಎಂಸಿಯಲ್ಲಿ ಮಾರ್ಗಸೂಚಿ ಕಾರ್ಯಕ್ರಮ

# ಜೀವ ರಕ್ಷಣೆಗೆ ಸಿಪಿಆರ್ ಜ್ಞಾನ ಎಲ್ಲರಿಗೂ ಅಗತ್ಯ

■ ವಿಜಯವಾಣಿ ಸುದ್ದಿಜಾಲ ಉಡುಪಿ

ಜೀವ ಉಳಿಸುವ ಕೌಶಲ ತಳಮಟ್ಟದವರನ್ನು ತಲುಪಿದಾಗ ಮಾತ್ರ ಅಂತಹ ತರಬೇತಿಗಳ ಪ್ರಯೋಜನ ಲಭಿಸಲು ಸಾಧ್ಯ. ಸಿಪಿಆರ್ ವೈದ್ಯರಿಗೆ ಮಾತ್ರವಲ್ಲ, ಪ್ರತಿ ನಾಗರಿಕರಿಗೂ ತಿಳಿದಿರಬೇಕಾದ ಕೌಶಲ ಎಂದು ಮಾಹೆ ಮಣಿಪಾಲದ ಸಹ ಕುಲಪತಿ(ಆರೋಗ್ಯ ವಿಜ್ಞಾನ) ಡಾ.ಶರತ್ ಕುಮಾರ್ ರಾವ್ ಕೆ. ಹೇಳಿದರು.

ಮಣಿಪಾಲ ಕಸ್ತೂರ್ಬಾ ವೈದ್ಯಕೀಯ ಕಾಲೇಜ್(ಕೆಎಂಸಿ)ನಲ್ಲಿ ಅಮೆರಿಕನ್ ಹಾರ್ಟ್ ಅಸೋಸಿಯೇಷನ್(ಎಎಚ್ಎ), ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಎಂಎಎಚ್ಇ)ನ ಆಶ್ರಯದಲ್ಲಿ ಆಯೋಜಿಸಿದ್ದ ಭಾರತದಲ್ಲಿ ಕಾರ್ಡಿಯೋಪಲ್ಮನರಿ ರಿಸಸಿಟೇಶನ್(ಸಿಪಿಆರ್) ಮತ್ತು ತುರ್ತು ಕಾರ್ಡಿಯೋವಾಸ್ಕುಲರ್ ಕೇರ್(ಇಸಿಸಿ)ನ 2025ನೇ ಸಾಲಿನ ಮಾರ್ಗಸೂಚಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಎಎಚ್ಎಯ ಏಷ್ಯಾ ಪೆಸಿಫಿಕ್ ಉಪಾಧ್ಯಕ್ಷ ಜಾನ್ ಕಿಮ್ ಮಾತನಾಡಿ, ಹೃದಯ ತುರ್ತು ಸಂದರ್ಭಗಳಲ್ಲಿ ಬದುಕುಳಿಯುವ ಫಲಿತಾಂಶ ಸುಧಾರಿಸುವಲ್ಲಿ ಜಾಗತಿಕ ಸಹಯೋಗದ ಮಹತ್ವ ವಿವರಿಸಿದರು.




ಮಣಿಪಾಲ ಕೆಎಂಸಿಯಲ್ಲಿ ಆಯೋಜಿಸಿದ್ದ ಸಿಪಿಆರ್ ಮತ್ತು ಇಸಿಸಿ ತರಬೇತಿ ಕಾರ್ಯಕ್ರಮವನ್ನು ಡಾ.ಶರತ್ ಕುಮಾರ್ ರಾವ್ ಕೆ. ಉದ್ಘಾಟಿಸಿದರು. ಜಾನ್ ಕಿಮ್, ಡಾ.ಸಚಿನ್ ವಿ.ಮೆನನ್, ಡಾ.ಅನಿಲ್ ಕೆ.ಭಟ್, ಡಾ.ವಿಮಲ್ ಕೃಷ್ಣನ್ ಎಸ್., ಡಾ.ಸುಷ್ಮಾ ಪ್ರಭಾತ್ ಮತ್ತು ಡಾ.ನಿಶಾ ಸಾರಾ ಎಂ.ಜೆ. ಇದ್ದರು.

ಎಎಚ್ಎ ಇಂಡಿಯಾ ಕನ್ಸಲ್ಟೆಂಟ್‌ನ ಪ್ರಾದೇಶಿಕ ನಿರ್ದೇಶಕ ಡಾ.ಸಚಿನ್ ವಿ.ಮೆನನ್ ಮಾತನಾಡಿ, ಪುನರುಜ್ಜೀವನ ತರಬೇತಿ ಬಲಪಡಿಸುವಲ್ಲಿ ಭಾರತೀಯ ಸಂಸ್ಥೆಗಳ ಬೆಂಬಲವನ್ನು ಶ್ಲಾಘಿಸಿದರು.

ಕೆಎಂಸಿಯ ಡೀನ್ ಡಾ.ಅನಿಲ್ ಕೆ. ಭಟ್ ಸ್ವಾಗತಿಸಿದರು. ಕೆಎಂಸಿ ಮಣಿಪಾಲದ ತರಬೇತಿ ಕೇಂದ್ರದ ಸಂಯೋಜಕ ಡಾ.ವಿಮಲ್ ಕೃಷ್ಣನ್ ಎಸ್. ವಂದಿಸಿದರು. ಡಾ.ಸುಷ್ಮಾ ಪ್ರಭಾತ್ ಮತ್ತು ಡಾ.ನಿಶಾ ಸಾರಾ ಮುಂಡಪ್ಪಲ್ಲಿಲ್ ಜಾಕೋಬ್ ಕಾರ್ಯಕ್ರಮ ನಿರೂಪಿಸಿದರು.

THE TIMES OF INDIA, MANGALURU
WEDNESDAY, APRIL 1, 2026

## MAHE hosts rollout of AHA's CPR guidelines

The American Heart Association (AHA) rolled out its 2025 Guidelines for Cardiopulmonary Resuscitation (CPR) and Emergency Cardiovascular Care (ECC) in India at Kasturba Medical College (KMC), Manipal, a constituent unit of Manipal Academy of Higher Education (MAHE), on Tuesday. The event, themed 'Advancing Excellence in Resuscitation Science and Emergency Cardiovascular Care,' brought together healthcare leaders, academicians, and emergency care professionals to highlight updated, evidence-based practices in managing cardiac emergencies.

**DHRISHYA NEWS**

**LINK:** https://www.dhrishyanews.com/?p=34104

# ಮಣಿಪಾಲದಲ್ಲಿ AHA 2025 CPR ಮಾರ್ಗಸೂಚಿ ಬಿಡುಗಡೆ: ಸಮುದಾಯ ತರಬೇತಿಗೆ ಒತ್ತು..!!

by Dhrishya News – 31/03/2026 in ಆರೋಗ್ಯ, ಮುಖಪುಟ 0




0 SHARES 37 VIEWS

ಮಣಿಪಾಲ, ಮಾ.31: ಅಮೆರಿಕನ್ ಹಾರ್ಟ್ ಅಸೋಸಿಯೇಷನ್ (AHA) ಭಾರತದಲ್ಲಿ ಕಾರ್ಡಿಯೋಪಲ್ಮನರಿ ರಿಸಸಿಟೇಶನ್ (CPR) ಮತ್ತು ತುರ್ತು ಕಾರ್ಡಿಯೋವಾಸ್ಕುಲರ್ ಕೇರ್ (ECC) ಗಾಗಿ ತನ್ನ 2025ರ ಮಾರ್ಗಸೂಚಿಗಳನ್ನು ಮಣಿಪಾಲ ಅಕಾಡೆಮಿ ಒಫ್ ಹೈಯರ್ ಎಜುಕೇಶನ್ ಘಟಕವಾದ ಕಸ್ತೂರ್ಬ ಮೆಡಿಕಲ್ ಕಾಲೇಜ್ ನಲ್ಲಿ ಬಿಡುಗಡೆ ಮಾಡಿತು.

"ಪುನರುಜ್ಜೀವನ ವಿಜ್ಞಾನ ಮತ್ತು ತುರ್ತು ಕಾರ್ಡಿಯೋವಾಸ್ಕುಲರ್ ಕೇರ್‌ನಲ್ಲಿ ಅಡ್ವಾನ್ಸಿಂಗ್ ಎಕ್ಸಲೆನ್ಸ್" ಎಂಬ ವಿಷಯದಡಿ ನಡೆದ ಈ ಕಾರ್ಯಕ್ರಮದಲ್ಲಿ ಆರೋಗ್ಯ ತಜ್ಞರು, ಶಿಕ್ಷಣ ವಿದ್ವಾಂಸರು ಮತ್ತು ತುರ್ತು ಆರೈಕೆ ವೃತ್ತಿಪರರು ಭಾಗವಹಿಸಿದರು.



**VIJAYAVANI**

**LINK:** https://www.vijayavani.net/category/news/guideline-program-on-cardio-pulmonary-resuscitation-and-emergency-cardiovascular-care-at-udupi-manipal-kmc?ref=69cbc03e3b5519f687cdcbec

# ಜೀವ ಉಳಿಸುವ ಸಿಪಿಆರ್ ಜ್ಞಾನ ಎಲ್ಲರಿಗೂ ಅಗತ್ಯ

Published by ಪ್ರಶಾಂತ ಜಿ. ಭಾಗ್ವತ

Published On Mar 31, 2026, 8:29pm IST | Last updated :Mar 31, 2026, 8:31pm IST

Add as a preferred source on Google

ಬಳಿಕ ಓದಿ




ಮಣಿಪಾಲದ ಕೆಎಂಸಿಯಲ್ಲಿ ಆಯೋಜಿಸಿದ್ದ ಸಿಪಿಆರ್ ಮತ್ತು ಇಸಿಸಿ ತರಬೇತಿ ಕಾರ್ಯಕ್ರಮವನ್ನು ಡಾ. ಶರತ್ ಕುಮಾರ್ ರಾವ್ ಕೆ. ಉದ್ಘಾಟಿಸಿದರು. ಜಾನ್ ಕಿಮ್, ಡಾ. ನಚಿನ್ ವಿ. ಮೆನನ್, ಡಾ. ಅನಿಲ್ ಕೆ. ಭಟ್, ಡಾ. ವಿಮಲ್ ಕೃಷ್ಣನ್ ಎನ್., ಡಾ. ಸುಪ್ರಾ ಪ್ರಭಾತ್ ಮತ್ತು ಡಾ. ನಿಶಾ ಸಾರಾ ಎಂ.ಜೆ. ಇದ್ದರು.

* ಡಾ. ಶರತ್ ಕುಮಾರ್ ರಾವ್ ಕೆ. ಅಭಿಪ್ರಾಯ

* ಕೆಎಂಸಿಯಲ್ಲಿ ಮಾರ್ಗಸೂಚಿ ಕಾರ್ಯಕ್ರಮ

**ಉಡುಪಿ:** ಜೀವ ಉಳಿಸುವ ಕೌಶಲ ತಳಮಟ್ಟದವರನ್ನು ತಲುಪಿದಾಗ ಮಾತ್ರ ಅಂತಹ ತರಬೇತಿಗಳ ಪ್ರಯೋಜನ ಲಭಿಸಲು ಸಾಧ್ಯ. ಪೊಲೀಸ್, ಆಶಾ ಕಾರ್ಯಕರ್ತರು, ಆಟೋ ಚಾಲಕರು, ಶಿಕ್ಷಕರು ಮತ್ತು ಇತರರಿಗೆ ಕಾರ್ಡಿಯೋಪಲ್ಮನರಿ ರಿಸಸಿಟೇಶನ್ (ಸಿಪಿಆರ್) ಜ್ಞಾನದ ತರಬೇತಿ ನೀಡಿದರೆ ಹೃದಯಾಘಾತದಿಂದ ಆಸ್ಪತ್ರೆಗೆ ಬರುವ ಮೊದಲೇ ಅನೇಕರ ಜೀವ ಉಳಿಸಬಹುದು. ಸಿಪಿಆರ್ ವೈದ್ಯರಿಗೆ ಮಾತ್ರವಲ್ಲ, ಇದು ಪ್ರತಿ ನಾಗರಿಕನೂ ತಿಳಿದಿರಬೇಕಾದ ಕೌಶಲವಾಗಿದೆ ಎಂದು ಮಾಹೆ ಮಣಿಪಾಲದ ಸಹ ಕುಲಪತಿ (ಆರೋಗ್ಯ ವಿಜ್ಞಾನ) ಡಾ. ಶರತ್ ಕುಮಾರ್ ರಾವ್ ಕೆ. ಅಭಿಪ್ರಾಯಪಟ್ಟರು.

**DAIJIWORLD.COM**

**LINK**: https://www.daijiworld.com/news/newsDisplay?newsID=1310600

# Udupi: MAHE hosts rollout of AHA's 2025 CPR guidelines in India

Tue, Mar 31 2026 02:18:39 PM

*Media Release*

Udupi, Mar 31: The American Heart Association (AHA) rolled out its 2025 Guidelines for Cardiopulmonary Resuscitation (CPR) and Emergency Cardiovascular Care (ECC) in India at Kasturba Medical College (KMC), Manipal, a constituent unit of Manipal Academy of Higher Education (MAHE).

The event, themed 'Advancing Excellence in Resuscitation Science and Emergency Cardiovascular Care', brought together healthcare leaders, academicians and emergency care professionals to highlight updated, evidence-based practices in managing cardiac emergencies.



**KARAVALI XPRESS**

**LINK:** https://www.karavalixpress.in/2026/04/AHA.html

# ಮಾಹೆ ಮಣಿಪಾಲದಲ್ಲಿ ಭಾರತದಲ್ಲಿ ಎ ಎಚ್ ಎ (AHA) ಯ 2025 ಸಿ ಪಿ ಆರ್ ಮಾರ್ಗಸೂಚಿಗ ಬಿಡುಗಡೆ

KaravaliXpress~Janardhan Kodavoor ಏಪ್ರಿಲ್ 01, 2026




ಅಮೇರಿಕನ್ ಹಾರ್ಟ್ ಅಸೋಸಿಯೇಷನ್ (AHA) ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (MAHE) ನ ಘಟಕವಾದ ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜಿನಲ್ಲಿ (KMC), ಭಾರತದಲ್ಲಿ ಕಾರ್ಡಿಯೋಪಲ್ಮನರಿ ರಿಸಸಿಟೇಶನ್ (CPR) ಮತ್ತು ತುರ್ತು ಕಾರ್ಡಿಯೋವಾಸ್ಕುಲರ್ ಕೇರ್ (ECC) ಗಾಗಿ ತನ್ನ 2025 ಮಾರ್ಗಸೂಚಿಗಳನ್ನು ಹೊರಡಿಸಿದೆ.

"ಪುನರುಜ್ಜೀವನ ವಿಜ್ಞಾನ ಮತ್ತು ತುರ್ತು ಕಾರ್ಡಿಯೋವಾಸ್ಕುಲರ್ ಕೇರ್‌ನಲ್ಲಿ ಅಡ್ವಾನ್ಸಿಂಗ್ ಎಕ್ಸಲೆನ್ಸ್" ಎಂಬ ವಿಷಯದೊಂದಿಗೆ ನಡೆದ ಈ ಕಾರ್ಯಕ್ರಮವು ಆರೋಗ್ಯ ರಕ್ಷಣಾ ನಾಯಕರು, ಶಿಕ್ಷಣ ತಜ್ಞರು ಮತ್ತು ತುರ್ತು ಆರೈಕೆ ವೃತ್ತಿಪರರನ್ನು ಒಟ್ಟುಗೂಡಿಸಿ ಹೃದಯ ತುರ್ತುಸ್ಥಿತಿಗಳನ್ನು ನಿರ್ವಹಿಸುವಲ್ಲಿ ನವೀಕರಿಸಿದ, ಪುರಾವೆ ಆಧಾರಿತ ಅಭ್ಯಾಸಗಳ ಕುರಿತು ಬೆಳಕು ಚೆಲ್ಲಿತು.

ಕಾರ್ಯಕ್ರಮವು ಬೆಳಿಗ್ಗೆ ಉದ್ಘಾಟನೆಗೊಂಡು ದಿನವಿಡೀ ಮುಂದುವರೆಯಿತು. ಮಣಿಪಾಲದ ಕೆಎಂಸಿಯ ಡೀನ್ ಡಾ. ಅನಿಲ್ ಕೆ. ಭಟ್ ಸ್ವಾಗತಿಸಿದರು ಮತ್ತು ಕಾರ್ಯಕ್ರಮದ ಅವಲೋಕನವನ್ನು ಮಂಡಿಸಿದರು. ಎಎಚ್‌ಎಯ ಏಷ್ಯಾ ಪೆಸಿಫಿಕ್ ಉಪಾಧ್ಯಕ್ಷ ಶ್ರೀ ಜಾನ್ ಕಿಮ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಹೃದಯ ತುರ್ತು ಸಂದರ್ಭಗಳಲ್ಲಿ ಬದುಕುಳಿಯುವ ಫಲಿತಾಂಶಗಳನ್ನು ಸುಧಾರಿಸುವಲ್ಲಿ ಜಾಗತಿಕ ಸಹಯೋಗದ ಮಹತ್ವವನ್ನು ಒತ್ತಿ ಹೇಳಿದರು. ಎಎಚ್‌ಎ ಇಂಡಿಯಾ ಕನ್ಸಲ್ಟೆಂಟ್ ಪ್ರಾದೇಶಿಕ ನಿರ್ದೇಶಕ ಡಾ. ಸಚಿನ್ ವಿ. ಮೆನನ್ ಅವರು ಎಎಚ್‌ಎ ಇಂಡಿಯಾಗೆ ಕೃತಜ್ಞತೆ ಸಲ್ಲಿಸಿದರು ಮತ್ತು ಪುನರುಜ್ಜೀವನ ತರಬೇತಿಯನ್ನು ಬಲಪಡಿಸುವಲ್ಲಿ ಭಾರತೀಯ ಸಂಸ್ಥೆಗಳ ಬೆಂಬಲವನ್ನು ಶ್ಲಾಘಿಸಿದರು.

ಕಾರ್ಯಕ್ರಮದ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಿದ್ದ ಮಾಹೆ ಮಣಿಪಾಲದ ಸಹ ಕುಲಪತಿ (ಆರೋಗ್ಯ ವಿಜ್ಞಾನ) ಡಾ. ಶರತ್ ಕುಮಾರ್ ರಾವ್ ಕೆ. ಮಾತನಾಡಿ, ಜೀವ ಉಳಿಸುವ ಕೌಶಲ್ಯಗಳು ತಳಮಟ್ಟದವರನ್ನು ತಲುಪಿದಾಗ ಮಾತ್ರ ಅಂತಹ ಮಾರ್ಗಸೂಚಿಗಳ ನಿಜವಾದ ಪರಿಣಾಮ ಸಾಧಿಸಲಾಗುತ್ತದೆ ಎಂದು ಒತ್ತಿ ಹೇಳಿದರು. ಸಿಪಿಆರ್ ಅರಿವು ಮತ್ತು ತರಬೇತಿಯನ್ನು ಆಸ್ಪತ್ರೆಗಳನ್ನು ಮೀರಿ ಸಮುದಾಯ ಮಟ್ಟಕ್ಕೆ ವಿಸ್ತರಿಸುವ ಅಗತ್ಯತೆ ಕುರಿತು ಅವರು ಮಾತನಾಡಿದರು, ಇದರಲ್ಲಿ ಪೊಲೀಸ್ ಸಿಬ್ಬಂದಿ, ಆಶಾ ಕಾರ್ಯಕರ್ತರು, ಆಟೋ ಚಾಲಕರು, ಶಿಕ್ಷಕರು ಮತ್ತು ಇತರ ಪ್ರಥಮ ಪ್ರತಿಕ್ರಿಯೆ ನೀಡುವವರು ಸೇರಿದ್ದಾರೆ. "ನಾವು ಸಮುದಾಯ ಮಟ್ಟದಲ್ಲಿ ಜನರಿಗೆ ತರಬೇತಿ ನೀಡಲು ಸಾಧ್ಯವಾದರೆ - ಆಸ್ಪತ್ರೆಗೆ ಬರುವ ಮೊದಲು ಸ್ಥಳದಲ್ಲಿ ಇರುವವರು - ಇನ್ನೂ ಅನೇಕ ಜೀವಗಳನ್ನು ಉಳಿಸಬಹುದು. ಸಿಪಿಆರ್ ವೈದ್ಯರಿಗೆ ಮಾತ್ರವಲ್ಲ. ಇದು ಪ್ರತಿಯೊಬ್ಬ ನಾಗರಿಕನು ತಿಳಿದಿರಬೇಕಾದ ಕೌಶಲ್ಯವಾಗಿದೆ,"